**ಓ.ಎಸ್. No**: 18/2022 **P.W**:1

**ದಿನಾಂಕ : 26.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀಮತಿ. ಎ.ಎಸ್.ಎಂ. ವಕೀಲರಿಂದಃ–**

ಕಂದಾಯ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ನನ್ನ ತಂದೆಯ ಬಳಿ ರಶಿದಿಗಳಿದ್ದವು ಅವರು ಈಗ ತೀರಿಕೊಂಡಿರುತ್ತಾರೆ ಹೀಗಾಗಿ ಹುಡುಕಬೇಕು ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಅವರ ತವರು ಮನೆಯವರು ಅರಿಶಿನ ಕುಂಕುಮಕ್ಕಾಗಿ ಹಣ ಕೊಟ್ಟಿದ್ದರ ಬಗ್ಗೆ ಹಾಗೂ ಅವರು ನನ್ನ ತಾಐಇಗೆ ಹಣ ಕೊಡಲು ಆರ್ಥಿಕವಾಗಿ ಸಮರ್ಥರಾಗಿದ್ದರು ಎನ್ನುವ ಬಗ್ಗೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಾಯಿ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿಗೆ ಒಡವೆ ಇತ್ತು, ಅವುಗಳನ್ನು ಮಾರಿದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನೀವೇ ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಫೋಟೋಗಳನ್ನು, ಹಿಡುವಳಿ ಪತ್ರಗಳನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಕೇಸು ಹಾಕುವುದಕ್ಕಿಂತ 6 ತಿಂಗಳು ಮೊದಲು ನಾನು ದಾವಾ ಆಸ್ತಿಗಳ ದಾಖಲಾತಿಗಳನ್ನು ನಾನು ನೋಡಿಕೊಂಡಿರುತ್ತೇನೆ. ಸರ್ಕಾರಿ ಸವಲತ್ತುಗಳನ್ನು ಪಡೆಯುವುದರ ಸಲುವಾಗಿ ದಾಖಲಾತಿಗಳನ್ನು ತೆಗೆಸಿ ನೋಡಿರುತ್ತೇನೆ. ದಾಖಲೆ ಪಡೆದುಕೊಳ್ಳುವುದಕ್ಕಿಂತ ಮೊದಲು ನಿಮಗೆ ದಾವಾ ಆಸ್ತಿ ಅಸ್ತಿತ್ವದಲ್ಲಿ ಇತ್ತಾ ಎಂದು ಗೊತ್ತಿತ್ತಾ ಎಂದರೆ ಸಾಕ್ಷಿ ಅದರ ಸ್ವಾಧೀನದಲ್ಲಿ ನಾವೇ ಇದ್ದೇವು ಹೀಗಾಗಿ ಅಸ್ತಿತ್ವ ಗೊತ್ತಿತ್ತು, ಆದರೆ ದಾಖಲಾತಿಗಳನ್ನು ನೋಡಿರಲಿಲ್ಲ ಎಂದು ನುಡಿಯುತ್ತಾರೆ.

ನನ್ನ ತಾಯಿ ತೀರಿಕೊಂಡ ನಂತರ ದಾವಾ ಆಸ್ತಿಯ ಸ್ವಾಧೀನಕ್ಕೆ ನಾವೇ ಬಂದಿರುತ್ತೇವೆ. ನನ್ನ ತಾಯಿ ತೀರಿಕೊಂಡಾಗಿನಿಂದ ದಾವಾ ಆಸ್ತಿಯ ಸ್ವಾಧೀನಕ್ಕೆ ಬಂದಿರುತ್ತೇನೆ ಎಂದು ಹೇಳಿರುತ್ತೀರಿ ಹಾಗಾದರೆ ನೀವು ದಾಖಲಾತಿಗಳನ್ನು ನೋಡಿಯೇ ಇಲ್ಲವಾ ಎಂದರೆ ಸಾಕ್ಷಿ

ಸ್ವಾಧೀನದಲ್ಲಿ ಇದ್ದೇವು, ಆದರೆ ದಾಖಲಾತಿಗಳನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಮಲ್ಲಿಗಮ್ಮರವರನ್ನು ಮದುವೆ ಮಾಡಿಕೊಂಡ ಮೇಲೆ ನಾನು, ನನ್ನ ತಂದೆ ಮತ್ತು ಮಲ್ಲಿಗಮ್ಮ ಒಟ್ಟಿಗೆ ವಾಸವಾಗಿದ್ದೇವು ಎಂದರೆ ಸರಿಯಲ್ಲ. ನನ್ನ ತಂದೆ ನಮ್ಮನ್ನು ಸಾಕುವುದಕ್ಕೋಸ್ಕರವೇ ಮಲ್ಲಿಗಮ್ಮರವರನ್ನು ಮದುವೆಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಮಲ್ಲಿಗಮ್ಮರವರನ್ನು ಮದುವೆ ಮಾಡಿಕೊಳ್ಳುವುದಕ್ಕಿಂತ ಮೊದಲು ಅವರ ತಂದೆ ತಾಯಿಗೆ ನನ್ನ ತಂದೆ ದಾವಾ ಆಸ್ತಿಯನ್ನು ಪ್ರತಿವಾದಿಯ ಹೆಸರಿಗೆ ಮಾಡುತ್ತೇನೆ ಎಂದು ಹೇಳಿಯೇ ನಮ್ಮನ್ನು ಸಾಕುವುದಕ್ಕೋಸ್ಕರ ಪ್ರತಿವಾದಿಯನ್ನು ನನ್ನ ತಂದೆ ಮದುವೆ ಮಾಡಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿ ನನ್ನ ತಾಯಿಯ ಆಸ್ತಿಯಾಗಿದ್ದು, ಒಂದು ವೇಳೆ ನನ್ನ ತಂದೆಯೇ ಆಸ್ತಿಯನ್ನು ಪ್ರತಿವಾದಿಗೆ ಕೊಡಬೇಕು ಎನ್ನುವ ಇಚ್ಛೆ ಇದ್ದರೆ ಅವರಿಗೆ ಇದ್ದ ಬೇರೆ ಆಸ್ತಿಯಲ್ಲಿ ಕೊಡಬಹುದಾಗಿತ್ತು ಎಂದು ನುಡಿಯುತ್ತಾರೆ.

ಕಂದಾಯ ನ್ಯಾಯಾಲಯದಲ್ಲಿ ಮುಂದೆ ಮೇಲ್ಮನವಿ ಸಲ್ಲಿಸಿದ್ದರ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಕಂದಾಯ ನ್ಯಾಯಾಲಯದಲ್ಲಿ ಏನು ಆದೇಶವಾಗಿದೆ ಎಂದರೆ ಸಾಕ್ಷಿ ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯ ಬಗೆಹರಿಸಿಕೊಳ್ಳಿ ಎಂದು ಆದೇಶವಾಗಿರುತ್ತದೆ ಎಂದು ನುಡಿಯುತ್ತಾರೆ. ಕಂದಾಯ ನ್ಯಾಯಾಲಯದ ಆದೇಶದ ಪ್ರತಿಯನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ.

ದಾವಾ ಆಸ್ತಿಯ ಬ್ಯಾಂಕ್ ಸಾಲ ಇದೆ ಎಂದರೆ ಗೊತ್ತಿಲ್ಲ. ನನ್ನ ತಂಗಿಯ ಮದುವೆಗೋಸ್ಕರವೇ ಪ್ರತಿವಾದಿ ಬ್ಯಾಂಕಿನಲ್ಲಿ ಸಾಲ ತೆಗೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಇಲ್ಲಾ ನನ್ನ ತಂಗಿಯ ಮದುವೆಯನ್ನು ನಾವೇ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಬದುಕಿರುವವರೆಗೆ ಖಾತೆ ಬದಲಾವಣೆಯಾಗಿರುವ ವಿಷಯ ನಿಮಗೆ ಗೊತ್ತಿರಲಿಲ್ಲವಾ ಎಂದರೆ ಸಾಕ್ಷಿ ನಮ್ಮ ತಂದೆ ನಮ್ಮ ಜೊತೆ ವಾಸವಾಗಿರಲಿಲ್ಲ ಹೀಗಾಗಿ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. 1 ರಿಂದ 3ನೇ ವಾದಿಯರ ವಿಳಾಸವನ್ನು ವಾದ ಪತ್ರದ ಶೀರೋನಾಮೆಯಲ್ಲಿ ಒಂದೇ ತೋರಿಸಿದ್ದೇನೆ ಎಂದರೆ ಸರಿ. ನಿಮ್ಮ ತಾಯಿ ತವರು ಮನೆಯವರಿಗೆ 10 ಎಕರೆ

ಜಮೀನು ಇದ್ದು, ಅದರಲ್ಲಿ ತೆಂಗು, ಕಬ್ಬು, ಅಡಿಕೆ ಮತ್ತು ಭತ್ತ ಬೆಳೆಯುತ್ತಿದ್ದೇವು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಂದೆ ದಾವಾ ಆಸ್ತಿಯನ್ನು ನನ್ನ ತಾಯಿಯ ಹೆಸರಿಗೆ ಖರೀದಿ ಮಾಡಿದ್ದರಿಂದ ಅದರಲ್ಲಿ ಪ್ರತಿವಾದಿಗೂ ಸಹಾ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ದಾವಾ ಆಸ್ತಿಯನ್ನು ಖರೀದಿ ಮಾಡುವಷ್ಟು ಆರ್ಥಿಕ ಸಾಮರ್ಥ್ಯ ಇರಲಿಲ್ಲ, ಆದಾಗ್ಯೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1994–95 ರಲ್ಲಿ ಖುದ್ದಾಗಿ ನನ್ನ ತಂದೆಯ ದಾವಾ ಆಸ್ತಿಯ ಖಾತೆಯನ್ನು ಪ್ರತಿವಾದಿಯ ಹೆಸರಿಗೆ ಮಾಡಿದ್ದು, ಅದಕ್ಕೆ ನಾನು ಸಹಾ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1994–95 ರಲ್ಲಿ ನಾನು 4 ಅಥವಾ 5 ನೇ ತರಗತಿಯಲ್ಲಿ ಓದುತ್ತಿದ್ದೆ ಹೀಗಾಗಿ ಸಹಿ ಮಾಡುವ ಪ್ರಶ್ನೆಯೇ ಇರುವುದಿಲ್ಲ ಎಂದು ನುಡಿಯುತ್ತಾರೆ. 1986 ರ ಇಸವಿಯಲ್ಲಿ ನನ್ನ ತಂದೆಯ ಜಮೀನು ನಾಲೆಗೆ ಹೋಗಿತ್ತು, ಅದರಿಂದ ಬಂದ ಹಣದಿಂದಲೇ ನನ್ನ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಿ ನನ್ನ ತಾಯಿಯ ಹೆಸರಿಗೆ ನೋಂದಣಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದಂತಹ 8 ಎಕರೆ ಆಸ್ತಿ ನನಗೆ ಇದೆ ಎಂದರೆ ಸರಿ. ಸದರಿ 8 ಎಕರೆ ಜಮೀನಿನಲ್ಲಿ ಪ್ರತಿವಾದಿ ಮತ್ತು ಅವರ ಮಕ್ಕಳಿಗೆ ಸಮಾನ ಹಕ್ಕು ಇದೆ ಎಂದರೆ ಸಾಕ್ಷಿ ಅದರಲ್ಲಿ ಬೇಕಾದರೆ ಅವರು ಪಾಲು ಪಡೆಯಬಹುದು ಎಂದು ನುಡಿಯುತ್ತಾರೆ. ದಾವಾ ಆಸ್ತಿಯೂ ಸಹಾ ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದರಲ್ಲಿಯೂ ಸಹಾ ಪ್ರತಿವಾದಿಗೆ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಸ್ವಾಧೀನ ಇಲ್ಲಾ ಎಂದರೆ ಸರಿಯಲ್ಲ. ಸುಮಾರು ವರ್ಷಗಳಿಂದ ಅದು ಪಾಳು ಬಿದ್ದಿದೆ ಎಂದರೆ ಸರಿಯಲ್ಲ.

ಪ್ರತಿವಾದಿ ನಮ್ಮನ್ನು ಕೊಲೆ ಮಾಡಲು ಬಂದಿದ್ದರು ಎಂದು ವಾದ ಪತ್ರದಲ್ಲಿ ಹೇಳಿಕೊಂಡಿದ್ದು, ಆ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತೀರ ಎಂದರೆ ಸಾಕ್ಷಿ ಆಗೆಲ್ಲಾ ನಾನು ತುಂಬಾ ಸಣ್ಣ ಮಕ್ಕಳು ಎಂದು ನುಡಿಯುತ್ತಾರೆ. ನನ್ನ ತಂದೆ ದಾವಾ ಆಸ್ತಿಯನ್ನು ಪ್ರತಿವಾದಿಗೆ ಕನ್‌ಸೆಂಟ್ ಕೊಟ್ಟು ಖಾತೆ ಬದಲಾವಣೆ ಮಾಡಿರುವ ವಿಷಯ ನನಗೆ ಗೊತ್ತಿದ್ದರು

**ಓ.ಎಸ್. No: 18/2022** **P.W:1**

ಸಹಾ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಸಮಯಕ್ಕೆ ನನ್ನ ತಂದೆ ಬದುಕಿದ್ದರು. ದಾವಾ ಆಸ್ತಿ ನನ್ನ ತಾಯಿಯ ಆಸ್ತಿಯಾಗಿದ್ದರಿಂದ ನನ್ನ ತಂದೆಯನ್ನು ಈ ಪ್ರಕರಣದಲ್ಲಿ ಸೇರಿಸಿರಲಿಲ್ಲ. 1994–95 ನೇ ಇಸವಿಯಲ್ಲಿ ನನ್ನ ತಂದೆ ದಾವಾ ಆಸ್ತಿಯನ್ನು ಪ್ರತಿವಾದಿ ಹೆಸರಿಗೆ ಮಾಡಿದ್ದರಿಂದ ಅವರನ್ನು ಈ ಪ್ರಕರಣದಲ್ಲಿ ಸೇರಿಸಬಹುದಾಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆಯೇ ಖುದ್ದಾಗಿ ದಾವಾ ಆಸ್ತಿ ಖಾತೆಯನ್ನು ಪ್ರತಿವಾದಿ ಹೆಸರಿಗೆ ಮಾಡಿದ್ದರಿಂದ ಮತ್ತು ನಮ್ಮನ್ನು ಸಾಕುವ ಉದ್ದೇಶದಿಂದಲೇ ಪ್ರತಿವಾದಿಯರನ್ನು ಮದುವೆ ಮಾಡಿಕೊಂಡಿದ್ದರಿಂದ ನಮ್ಮ ತಂದೆಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದರೆ ನಮಗೆ ಅನಾನುಕೂಲವಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯೇ ದಾವಾ ಆಸ್ತಿಯನ್ನು ಖರೀದಿ ಮಾಡಿ ನನ್ನ ತಾಯಿ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿದ್ದರಿಂದ ನನ್ನ ತಂದೆ ದಾವಾ ಆಸ್ತಿಯ ಖಾತೆಯನ್ನು ಪ್ರತಿವಾದಿ ಹೆಸರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದು, ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯೇ ನಮ್ಮನ್ನು ಸಾಕಿ ಸಲುಹುದ್ದು, ಪ್ರತಿವಾದಿಯೇ ಬ್ಯಾಂಕ್ ಸಾಲ ತೆಗೆದುಕೊಟ್ಟಿದ್ದರಿಂದಲೇ ನಾವು ನಮ್ಮ ತಂಗಿ ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಕೆಲಸವನ್ನು ಪ್ರತಿವಾದಿಯ ಮಗನೇ ಕೊಡಿಸಿರುತ್ತಾನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು
ಹೊಳೆನರಸೀಪುರ.